**ಎಂ.ವಿ.ಸಿ. ನಂ. 1704/2024**
**ಪಿಡಬ್ಲ್ಯೂ -1**

(ಇಂದು ದಿನಾಂಕಃ 02-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು : 2ನೇ ಪ್ರತಿವಾದಿ ಪರ ಶ್ರೀ ವೈ.ಅರ್ಜುನ ರಾವ ವಕೀಲರಿಂದಃ**

ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರುತ್ತವೆ. ನಾನು ಹೇಳಿದಂತೆ ನಮ್ಮ ವಕೀಲರು ಸಾಕ್ಷಿ ಪ್ರಮಾಣಪತ್ರವನ್ನು ತಯಾರಿಸಿರುತ್ತಾರೆ. ಮೃತ ಸಿದ್ದಣ್ಣ ನನ್ನ ಮಗ. ಸಿದ್ದಣ್ಣನನ್ನು ಹೊರತುಪಡಿಸಿ ನನಗೆ ಇನ್ನು ಇಬ್ಬರು ಮಕ್ಕಳು ಇರುತ್ತಾರೆ. ಅವರು ಶಾಲೆಗೆ ಹೋಗುತ್ತಾರೆ. ಒಬ್ಬ 10ನೇ ತರಗತಿ ಮತ್ತೊಬ್ಬ 12 ತರಗತಿ ಕಲಿಯತ್ತಾ ಇರುತ್ತಾರೆ.

ನಾನು ಮನೆಗೆಲೆಸ ಮಾಡುತ್ತೇನೆ. ನನ್ನ ಗಂಡನು ಸಹ ಏನೂ ಕೆಲಸ ಮಾಡುವುದಿಲ್ಲ. ನಮಗೆ 3 ಎಕರೆ ಕ್ಷೇತ್ರ ಕೃಷಿ ಜಮೀನು ಇರುತ್ತದೆ. ನನ್ನ ಮಗ ಸಿದ್ದಣ್ಣ ತೀರಿಕೊಂಡಾಗ ಆತನ ವಯಸ್ಸು 22 ಇತ್ತು. ನನ್ನ ಮಗ ಸಿದ್ದಣ್ಣ ತೀರಿಕೊಂಡಾಗ ಆತನ ವಯಸ್ಸು 22 ಇತ್ತು ಎಂದು ತೋರಿಸಲು ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ. ನನ್ನ ಮೃತ ಮಗ ಸಿದ್ದಣ್ಣ ಪದವೀಧರ ಇದ್ದ. ಆತನ ಮದುವೆ ಆಗಿರಲಿಲ್ಲ. ನನ್ನ ಮೃತ ಮಗ ಸಿದ್ದಣ್ಣ ಚಾಲನ ಪರವಾನಗಿ ಹೊಂದಿದ್ದ. ಆತನ ಚಾಲನ ಪರವಾನಗಿಯನ್ನು ನ್ಯಾಯಲಾಯಕ್ಕೆ ಹಾಜರು ಪಡಿಸಿರುತ್ತೇನೆ. ಅಪಘಾತಕ್ಕೊಳಗಾದ ಪಲ್ಸರ್ ಬೈಕ್ ನನ್ನ ಗಂಡನ ಹೆಸರಿನಲ್ಲಿತ್ತು. ಅದರ ವಿಮಾ ಪಾಲಿಸಿ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಮಗ ಪಲ್ಸರ್ ಬೈಕ್ ಚಲಾಯಿಸುತ್ತಿದ್ದಾಗ ಹೆಲ್ಮೆಟ್ ಧರಿಸಿದ್ದ.

ನನ್ನ ಮೃತ ಮಗ ಸಿದ್ದಣ್ಣ ಹೈದರಾಬಾದಿನಲ್ಲಿ ಕೆಲಸ ಮಾಡುವ ಕಂಪನಿಯ ಜೊತೆ ಆದ ಒಪ್ಪಂದ ಪತ್ರದ ಬಗ್ಗೆ ಮಾಹಿತಿ ಇಲ್ಲ. ಅದರ ದಾಖಲಾತಿಯು ನನ್ನ ಬಳಿ ಇಲ್ಲ. ನನ್ನ ಮಗ ಹೈದರಾಬಾದ ಕಂಪನಿಯಲ್ಲಿ ಏನು ಅಂತ ಕೆಲಸ ಮಾಡುತ್ತಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಮೃತ ಮಗ ಸಿದ್ದಣ್ಣ ತಿಂಗಳಿಗೆ 40 ಸಾವಿರ ರೂ. ಸಂಬಳ ಪಡೆಯುತ್ತಿದ್ದ ಎಂದು ತೋರಿಸಲು ದಾಖಲಾತಿಯನ್ನು ಸಲ್ಲಿಸಿಲ್ಲ. ನನ್ನ ಮೃತ ಮಗ ಸಿದ್ದಣ್ಣ ಪೋಕ್ಸನ್ ಕಂಪನಿಯಲ್ಲಿ 15 ದಿನ ಕೆಲಸ ಮಾಡಿರುತ್ತಾನೆ. ಆದರೆ ಇದಕ್ಕಿಂತ ಮುಂಚೆ ಬೇರೆ ಕಂಪನಿಯಲ್ಲಿ ಕೆಲಸ ಮಾಡಿರುತ್ತಾನೆ. ಆ ಬಗ್ಗೆ ತೋರಿಸಲು ಯಾವುದೇ ದಾಖಲೆಯನ್ನು ಸಲ್ಲಿಸಿರುವುದಿಲ್ಲ ಮತ್ತು ಆ ಕಂಪನಿ ಹೆಸರು ಹೇಳಲು ಬರುವುದಿಲ್ಲ. ಪೋಕ್ಸನ್ ಕಂಪನಿಗಿಂತ ಮುಂಚೆ ಬೇರೆ ಕಂಪನಿಯಲ್ಲಿ ಕೆಲಸಲ ಮಾಡುತ್ತಾ ತಿಂಗಳಿಗೆ 35 ಸಾವಿರ ಸಂಬಳ ಪಡೆಯುತ್ತಿದ್ದ ಎಂದು ತೋರಿಸಲು ಯಾವುದೇ ದಾಖಲಾತಿ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಮಗ ಆದಾಯ ತೆರಿಗೆದಾರ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಆತನ ಸಂಬಳದಲ್ಲಿ ಆದಾಯ ತೆರಿಗೆ ಪಾವತಿ ಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ.

2ನೇ ಅರ್ಜಿದಾರ ನನ್ನ ಗಂಡ. ಮೃತ ಸಿದ್ದಣ್ಣನ ಆದಾಯದ ಮೇಲೆ ನಮ್ಮ ಒಟ್ಟು ಕುಟುಂಬ ನಡೆಯುತ್ತಿತ್ತು. ನನ್ನ ಮೃತ ಮಗ ಸಿದ್ದಣ್ಣ ಮಾಡುತ್ತಿದ್ದ ಕಂಪನಿಯನ್ನು ನಾನು ಖುದ್ದಾಗಿ

ನೋಡಿರುವುದಿಲ್ಲ. ಅಪಘಾತವಾದ ಸಮಯದಲ್ಲಿ ನಾನು ನಮ್ಮ ಊರಾದ ನಿಡಗುಂದಯಲ್ಲಿ ಇದ್ದೆನು. ಅಪಘಾತದ ವಿಷಯವನ್ನು ನಮಗೆ ಕಂಪನಿಯವರು ಪೋನ ಮುಖಾಂತರ ತಿಳಿಸಿರುತ್ತಾರೆ, ಅವರ ಹೆಸರು ಹೇಳಲು ಬರುವುದಿಲ್ಲ. ಅಪಘಾತದ ವಿಷಯವನ್ನು ತಿಳಿದ ನಂತರ ಸುಮಾರು ಮಧ್ಯಾಹ್ನ 3-4 ಗಂಟೆಗೆ ಅಪಘಾತದ ಸ್ಥಳಕ್ಕೆ ಹೋಗಿರುತ್ತೇವೆ. 1ನೇ ಎದುರುದಾರನ ನಿರ್ಲಕ್ಷದಿಂದ ಅಪಘಾತವಾಗಿರುತ್ತದೆ ಎಂಬ ವಿಷಯವನ್ನು ನಾನು ಯಾರಿಂದ ಕೇಳಿ ನಮೂದಿಸಿರುವುದಿಲ್ಲ. ನನ್ನ ಸ್ವಂತ ಬುದ್ದಿಯಿಂದ ನಮೂದಿಸಿರುತ್ತೇನೆ. ಅಪಘಾತವಾದ ನಂತರ ನಾವು ದೂರನ್ನು ದಾಖಲಿಸಿರುವುದಿಲ್ಲ. ಕಂಪನಿಯವರೇ ದೂರನ್ನು ದಾಖಲಿಸಿರುತ್ತಾರೆ. ದಾಖಲಿಸಿದ ಪೋಲೀಸ ಠಾಣೆಯ ಹೆಸರು ಹೇಳಲು ಬರುವುದಿಲ್ಲ. ಪೋಲೀಸರು ಪಂಚನಾಮೆ ಮಾಡಿದ ಬಗ್ಗೆ ಯಾಗಲೀ, ತನಿಖೆ ಮಾಡಿದ ಬಗ್ಗೆಯಾಗಲೀ ನನಗೆ ಮಾಹಿತಿ ಇಲ್ಲ. ನಾವು ಹೋದ ನಂತರ ಆಸ್ಪತ್ರೆಯಲ್ಲಿ ಶವ ಪಂಚನಾಮೆಯನ್ನು ಮಾಡಿರುತ್ತಾರೆ. ಅಪಘಾತ ಮಾಡಿದ ಚಾಲಕನನ್ನು ನನ್ನ ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಅದರ ಮಾಲೀಕನನ್ನು ಮಾಡಿರುತ್ತೇನೆ. ನಾನು ಚಿಂಚೋಳಿ ತಾಲೂಕಿನ ಹದ್ದೆಯಲ್ಲಿ ಇರುವುದರಿಂದ ಇಲ್ಲಿ ಅರ್ಜಿಯನ್ನು ದಾಖಲಿಸಿರುತ್ತೇನೆ. ನಾನು ಮತ್ತು ನನ್ನ ಗಂಡ ಸರ್ಕಾರದಿಂದ ಯಾವುದೇ ವೃದ್ದಾಪ್ಯ ವೇತನವನ್ನು ಪಡೆಯುತ್ತಿಲ್ಲ.

ನನ್ನ ಕುಟುಂಬದ ತಿಂಗಳ ವೆಚ್ಚ ಎಷ್ಟು ಎಂದು ನನಗೆ ಗೊತ್ತಿಲ್ಲ. ನನ್ನ ಮಗ ಆತನ ಹೆಸರಿನಲ್ಲಿ ಯಾವುದೇ ವಿಮಾ ಪಾಲಿಸಿ, ಬ್ಯಾಂಕಿನಲ್ಲಿ ಹಣ ಇಟ್ಟಿರುವುದಿಲ್ಲ. ನನ್ನ ಮೃತ ಮಗ ಸಿದ್ದಣ್ಣ ಕೆಲಸ ಮಾಡುತ್ತಿದ್ದ ಕಂಪನಿಯವರು ಸಹ ನಮಗೆ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲ. ನಾವು ಕೇಳಿದರೂ ಸಹ ನೀಡಿರುವುದಿಲ್ಲ. ನನ್ನ ಅರ್ಜಿಯಲ್ಲಿ ಯಾವುದೇ ಆಧಾರವಿಲ್ಲದೆ ಹೆಚ್ಚು ಪರಿಹಾರ ಹಣವನ್ನು ಕೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೃತ ಮಗ ಸಿದ್ದಣ್ಣನ ತಪ್ಪಿ ನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.